ಕಾರ್ಯಗತವಾಗುತ್ತದೆ. ಆದ್ದರಿಂದ ಇದಕ್ಕೆ ಮಂಜೂರಾತಿ ಕೊಡುವುದಕ್ಕೆ ಸರ್ಕಾರಕ್ಕೆ ತಮ್ಮ ಮೂಲಕ ವಿನಂತಿ ಮಾಡುತ್ತೇನೆ.

ಶ್ರೀ ವೈಜನಾಥ ಪಾಟೀಲ್ : ಮಾನ್ಯ ಉಪಾಧ್ಯಕ್ಷರೆ, ಕುಡಿಯುವ ನೀರಿನ ಯೋಜನೆಗೆ ಹಾಗೂ ಒಳಚರಂಡಿ ಯೋಜನೆ ಸಂಬಂಧಿಸಿದಂತೆ ಪ್ರಸ್ತಾವನೆಗಳು ಬಹಳಷ್ಟು ನಗರಪಾಲಿಕೆಗಳಿಂದ ಸರ್ಕಾರಕ್ಕೆ ಬಂದಿದೆ. ಆ ಪ್ರಸ್ತಾವನೆಗಳನ್ನು ಮಂಡಳಿಯ ಮುಂದಿಟ್ಟು ಅಲ್ಲಿಂದ ಅಂಗೀಕಾರವಾಗಿ ಸರ್ಕಾರಕ್ಕೆ ಬಂದ ನಂತರ ನಾವು ಅದಕ್ಕೆ ಮಂಜೂರಾತಿ ಕೊಡುತ್ತೇವೆ.

ನಿಯಮ 351ರ ಮೇರೆಗೆ

(1) ವಿಷ್ಣು ಪವರ್ ಲಿಫ್ಟಿಂಗ್ ಚಾಂಪಿಯನ್‌ಷಿಪ್‌ಗೆ ಪ್ರೋತ್ಸಾಹ ನೀಡುವ ಸಲುವಾಗಿ ಕನಿಷ್ಠ 5 ಲಕ್ಷ ರೂಪಾಯಿಗಳ ಬಿಡುಗಡೆ.

ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) : ಮಾನ್ಯ ಉಪಾಧ್ಯಕ್ಷರೆ, ಸೆಪ್ಟಂಬರ್ 14ರಿಂದ ಮಂಗಳೂರಿನಲ್ಲಿ ನಡೆಯಲಿರುವ ಏಳನೇ ಪುರುಷ ಮತ್ತು ಆರನೇ ಮಹಿಳೆಯರ ವಿಷ್ಣು ಪವರ್ ಲಿಫ್ಟಿಂಗ್ ಒಕ್ಕೂಟದ ಆಶ್ರಯದಲ್ಲಿ ಕರ್ನಾಟಕ ಪವರ್ ಲಿಫ್ಟಿಂಗ್ ಚಾಂಪಿಯನ್ ಶಿಪ್‌ನಲ್ಲಿ ದೇಶದ ಮತ್ತು ವಿದೇಶದ ಸುಮಾರು 150 ಪವರ್ ಲಿಫ್ಟರ್‌ಗಳು ಭಾಗವಹಿಸಲಿದ್ದಾರೆ. ವಿಷ್ಣು ಪವರ್‌ಲಿಫ್ಟಿಂಗ್ ಒಕ್ಕೂಟ ಮತ್ತು ಭಾರತೀಯ ಪವರ್ ಲಿಫ್ಟಿಂಗ್ ಸಂಸ್ಥೆಯು ಈ ಚಾಂಪಿಯನ್ ಶಿಪ್‌ನ್ನು ಸಂಘಟಿಸುತ್ತದೆ. ಹಾಲಿ ವಿಷ್ಣು ಚಾಂಪಿಯನ್ ಕಜಕಿಸ್ಥಾನ ಸಹಿತ ಚೈನೀಸ್, ಥೈಪೆ, ಜಪಾನ್, ಕೊರಿಯಾ, ಪಾಕಿಸ್ಥಾನ, ಶ್ರೀಲಂಕಾ, ಇಂಡೋನೇಷಿಯಾ, ಫಿಲಿಪ್ಪೈನ್ಸ್ ಮತ್ತು ಭಾರತ ಈ ಟೂರ್ನಿಯಲ್ಲಿ ಭಾಗವಹಿಸಲಿದ್ದಾರೆ. ಸುಮಾರು 6 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ವಿಷ್ಣು ಚಾಂಪಿಯನ್‌ಶಿಪ್ ಸ್ಪರ್ಧೆ ನಡೆಯಲಿರುವುದು ಕರ್ನಾಟಕ ರಾಜ್ಯಕ್ಕೆ ಹೆಮ್ಮೆ ತರುವ ಈ ವಿಷ್ಣು ಪವರ್ ಲಿಫ್ಟಿಂಗ್ ಚಾಂಪಿಯನ್ ಶಿಪ್‌ಗೆ ಪ್ರೋತ್ಸಾಹ ಕೊಡಲು ಸರ್ಕಾರ ಕನಿಷ್ಠ 5 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲು ಮಾನ್ಯ ಯುವಜನ ಸೇವೆ ಮತ್ತು ಕ್ರೀಡಾ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಅಜಯಕುಮಾರ್ ಸರ್‌ನಾಯಕ್ (ಯುವಜನ ಸೇವೆ ಮತ್ತು ಕ್ರೀಡಾ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಇದು ಇನ್ನೂ ನನ್ನ ಗಮನಕ್ಕೆ ಬಂದಿಲ್ಲ. ಬಂದ ನಂತರ ಉತ್ತರ ಒದಗಿಸಿಕೊಡುತ್ತೇನೆ.

ಶ್ರೀ ಎನ್. ಯೋಗೀಶ್ ಭಟ್ : ಈ ಪ್ರಶ್ನೆಯನ್ನು ಅವರ ಇಲಾಖೆಗೆ ಕಳುಹಿಸಿ ಒಂದು ವಾರ ಆಗಿದೆ.

(2) ಕಾಪು ಮತ ಕ್ಷೇತ್ರದ ಮಳೂರು ಗ್ರಾಮ ಮತ್ತು ಶಿರ್ವ ಗ್ರಾಮಗಳಲ್ಲಿ ವಿಶ್ವ ಬ್ಯಾಂಕ್ ಯೋಜನೆ ಅನ್ವಯ ಕುಡಿಯುವ ನೀರಿನ ಯೋಜನೆಯ ಕಾಮಗಾರಿಗಳನ್ನು ಪೂರ್ಣಗೊಳಿಸುವ ಬಗ್ಗೆ.

ಶ್ರೀ ವಸಂತ ವಿ. ಸಾಲಿಯಾನ (ಕಾಪು) : ಮಾನ್ಯ ಉಪಾಧ್ಯಕ್ಷರೆ, ಕಾಪು ಮತ ಕ್ಷೇತ್ರದ ಮೂಳೂರು ಗ್ರಾಮ ಮತ್ತು ಶಿರ್ವ ಗ್ರಾಮಗಳಲಿ ವಿಶ್ವ ಬ್ಯಾಂಕ್ ಯೋಜನೆಯನ್ವಯ ಮಂಜೂರಾಗಿರುವ ಕುಡಿಯುವ ನೀರಿನ ಯೋಜನೆಯ ಕಾಮಗಾರಿಗಳನ್ನು ಪ್ರಾರಂಭಿಸಿ ಸಂಪೂರ್ಣಗೊಳಿಸಿರುವುದಿಲ್ಲ. ಸಾರ್ವಜನಿಕರಿಗೆ ಕುಡಿಯುವ ನೀರಿನ ತೀವ್ರ ತೊಂದರೆ ಇರುವುದರಿಂದ ಯೋಜನಾ ಕಾಮಗಾರಿಗಳನ್ನು ತ್ವರಿತವಾಗಿ ಸಂಪೂರ್ಣಗೊಳಿಸಿ ಜೀವನಾವಶ್ಯಕವಾಗಿರುವ ಕುಡಿಯುವ ನೀರನ್ನು ಒದಗಿಸುವಲ್ಲಿ ತುರ್ತು ಕ್ರಮವನ್ನು